# ಪಕ್ಷಿಕಾಶಿ ಖೇಲಾದೇವ್

**ಸಾರಸ್ ಕ್ರೌಂಚ ಹಕ್ಕಿಗಳ ಆವಾಸಕ್ಕೆ ಹೆಸರಾದ ರಾಜಸ್ಥಾನದ ಖೇಲಾದೇವ್ ಪಕ್ಷಿಧಾಮ ಪಕ್ಷಿಪ್ರಿಯರ ನೆಚ್ಚಿನ ತಾಣ. ವರ್ಷದಲ್ಲಿ ಅತಿ ಹೆಚ್ಚು ಕಾಲ ಪಕ್ಷಿವೀಕ್ಷಣೆಗೆ ಪ್ರಶಸ್ತವಾದ ವಿಶ್ವದ ಪ್ರಮುಖ ಪಕ್ಷಿಧಾಮ ಎನ್ನುವುದು ಇದರ ಹೆಮ್ಮೆ.**

■ ಡಿ.ಜಿ. ಮಲ್ಲಿಕಾರ್ಜುನ
ಚಿತ್ರಗಳು: ಓಂ ದೇಶಮುದ್ರೆ



ಐ.ಎ.ಎಸ್. ಅಧಿಕಾರಿ ಮನಮೋಹನ್ ಸಿಂಗ್ ಅವರ ‘ಟು ಎ ಪೇರ್ ಆಫ್ ಸಾರಸ್ ಕ್ರೇನ್ಸ್’ ಎಂಬ ಕವಿತೆ ಹತ್ತನೇ ತರಗತಿಯ ಇಂಗ್ಲಿಷ್ ಪಠ್ಯದಲ್ಲಿದೆ. ಜೀವನಪರ್ಯಂತ ಸಾರಸ್ ಕ್ರೌಂಚಗಳು ಜೋಡಿಗಳಾಗಿರದೇ ಸಾವಿನಾಚೆಗೂ ಅವು ಒಂದನ್ನೊಂದು ಬಿಟ್ಟು ಇರುವುದಿಲ್ಲ ಎಂಬ ಸಂಗತಿಯನ್ನು ಕವಿ ಮನೋಜ್ಞವಾಗಿ ಕವನದ ಮೂಲಕ ತಿಳಿಸಿದ್ದಾರೆ. ಜೋಡಿ ಸಾರಸ್ ಕ್ರೌಂಚಗಳ ಪ್ರೇಮದ ಮಧುರ ಕ್ಷಣಗಳನ್ನು ಹಾಳುಮಾಡುವ ಕ್ರೂರಿಯೊಬ್ಬ ನಿರ್ದಯದಿಂದ ಗಂಡನ್ನು ಕೊಲ್ಲುತ್ತಾನೆ. ಹೆಣ್ಣು ಸಾರಸ್‌ನ ಯಾತನೆ, ಮನೋವೇದನೆ ನಮ್ಮ ಕಣ್ಣಂಚು ಒದ್ದೆ ಮಾಡುವಂತಿದೆ. ಅದು ತನ್ನ ಪ್ರಾಣ ತ್ಯಜಿಸಿದಾಗ ಕವಿ, ‘ಅವು ಪರಲೋಕದಲ್ಲಿ ಜೋಡಿಯಾದವು’ ಎನ್ನುವರು.

ದೊಡ್ಡ ಗಾತ್ರದ, ನೀಳ ಕಾಲು ಹಾಗೂ ನೀಳ ಕತ್ತಿನ ಎತ್ತರದ ಪಕ್ಷಿಗಳಾದ ಕ್ರೌಂಚಗಳಲ್ಲಿ ಪ್ರಪಂಚದಾದ್ಯಂತ 14 ಪ್ರಭೇದಗಳಿವೆ. ಭಾರತದಲ್ಲಿ ಡೆಮೊಯ್ಸೆಲ್ಲಿ, ಕಾಮನ್ ಕ್ರೌಂಚ, ಸಾರಸ್ ಕ್ರೌಂಚ, ಸೈಬೀರಿಯನ್ ಅಥವಾ ದೊಡ್ಡ ಬಿಳಿ ಕ್ರೌಂಚಗಳನ್ನು ಕಾಣಬಹುದು. ತನ್ನ ಪುಕ್ಕವನ್ನು ಮೇಲೆತ್ತಿ ಹೆಣ್ಣನ್ನು ಆಕರ್ಷಿಸುವುದು ಮತ್ತು ಏಕಪತ್ನಿತ್ವದ ಗುಣ ಇವುಗಳ ವಿಶೇಷತೆ. ದಂಪತಿ ಹಕ್ಕಿಗಳಲ್ಲಿ ಒಂದು ಅಸುನೀಗಿದರೆ, ಜೊತೆಗಾರ ಹಕ್ಕಿಯು ಆಹಾರ ತಿನ್ನುವುದನ್ನು ಬಿಟ್ಟು ತನ್ನ ಸಂಗಾತಿಯನ್ನು ನೆನೆಯುತ್ತಾ ಸಾವನ್ನಪ್ಪುತ್ತದೆ.

ಭರತ್ ಪುರ್ ಅಥವಾ ಖೇಲಾದೇವ್ ಪಕ್ಷಿಧಾಮದಲ್ಲಿ ಸಾರಸ್ ಕ್ರೌಂಚಗಳನ್ನು ನೋಡುವುದೇ ಒಂದು ವಿಶಿಷ್ಟ ಅನುಭವ. ಹೆಚ್ಚೂಕಮ್ಮಿ ಮನುಷ್ಯನಷ್ಟು ಎತ್ತರದ ಬೂದುಬಣ್ಣದ ಹಕ್ಕಿಗಳಿವು. ನೀಳವಾದ ಕಾಲುಗಳು, ಕೆಂಪು ತಲೆ ಮತ್ತು ಮೇಲ್ಕತ್ತು ಅವುಗಳ ವಿಶೇಷಣ. ಕೃಷಿ ಅಥವಾ ಜೌಗು ಪ್ರದೇಶಗಳಲ್ಲಿ ಈ ಹಕ್ಕಿಗಳು ಜೋಡಿಯಾಗಿ ಅಥವಾ ಮರಿಗಳೊಡನೆ ಕೂಡಿ ಅಡ್ಡಾಡುವುದು ಹೆಚ್ಚು. ಇವು ಜೀವಾವಧಿ ಜೊತೆಗೂಡಿರುತ್ತವೆ. ಇವುಗಳ ಅನುರಕ್ತಿ ಜನಪದರ ಬಾಯಲ್ಲಿ ಆದರ್ಶದ ಕಥೆಗಳಾಗಿವೆ.

ಸಾರಸ್‌ಗಳ ಹಾರಾಟ ಕೊಂಚ ಶ್ರಮದಾಯಕವೆಂಬಂತೆ ಕಾಣುತ್ತದೆ. ತಮ್ಮ ಕತ್ತನ್ನು ಮುಂದೆ ಚಾಚಿ, ಕಾಲುಗಳನ್ನು ಹಿಂದೆ ಜೋಲು ಬಿಟ್ಟು, ವಿಶಾಲ ರೆಕ್ಕೆಗಳನ್ನು ನಿಧಾನವಾಗಿ ಬಡಿದು, ಸಮರ್ಥವಾಗಿ ಮತ್ತು ವೇಗವಾಗಿ ಹಾರಾಡುತ್ತವೆ. ನೆಲದ ಮೇಲಿದ್ದಾಗ ಮತ್ತು ಹಾರಾಡುವಾಗ ಅವುಗಳ ಕೂಗು ಎತ್ತರದ ಸ್ವರದ ನಾದ ಕಹಳೆಯಂತೆ ಬಹುದೂರದವರೆಗೆ ಕೇಳಿಸುತ್ತದೆ. ರೆಕ್ಕೆಗಳನ್ನು ಹರಡಿ ಜಂಬದಿಂದ ಮಾಡುವ ಅವುಗಳ ನರ್ತನ ಬಲು ಚೆನ್ನ. ಬಹುತೇಕ ಇವು ಕಾಳು, ಗೆಡ್ಡೆ, ಕಾಂಡ ತಿಂದರೂ ಕೀಟ, ಮೃದ್ವಂಗಿ, ಕಪ್ಪೆ, ಸರೀಸೃಪ, ಮೀನುಗಳನ್ನೂ ತಿನ್ನುತ್ತವೆ. ಜೌಗಿನಲ್ಲಿ ಜೊಂಡು, ಹುಲ್ಲಿನ ಮಿಶ್ರಣದ ದೊಡ್ಡ ರಾಶಿ ಮಾಡಿ ಮೊಟ್ಟೆಯಿಡುತ್ತವೆ.

ಸಾರಸ್ ಕ್ರೌಂಚವು ಉತ್ತರ ಪ್ರದೇಶದ ರಾಜ್ಯಪಕ್ಷಿ. ಇದು